**ದಿನಾಂಕ 10.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ: ಶ್ರೀ. ಕೆ.ಎಸ್.ಆರ್. ವಕೀಲರಿಂದಃ–**

ನಾನು ಅವಿದ್ಯಾವಂತನಾಗಿರುತ್ತೇನೆ. ನನಗೆ ಸಹಿ ಮಾಡಲು ಮಾತ್ರ ಬರುತ್ತದೆ, ಓದಲು–ಬರೆಯಲು ಬರುವುದಿಲ್ಲ. ಯಾವುದಾದರು ವ್ಯವಹಾರಕ್ಕೆ ಸಂಬಂಧಿಸಿದಂತೆ ಪತ್ರಗಳನ್ನು ಯಾರ ಬಳಿಯಾದರೂ ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ.

ನಾನು ವ್ಯವಸಾಯ ಮಾಡುತ್ತೇನೆ. ನನಗೆ 3½ ಯಿಂದ 4 ಎಕರೆ ಜಮೀನು ಇರುತ್ತದೆ. ಸರ್ವೆ ನಂ.89 ರಲ್ಲಿ 33 ಗುಂಟೆ, ಸರ್ವೆ ನಂ.89 ರಲ್ಲಿ 35 ಗುಂಟೆ, ಸರ್ವೆ ನಂ.92 ರಲ್ಲಿ 30 ಗುಂಟೆ, ಸರ್ವೆ ನಂ.14 ರಲ್ಲಿ 14 ಗುಂಟೆ, ಸರ್ವೆ ನಂ.27 ರಲ್ಲಿ 29 ಗುಂಟೆ, ಸರ್ವೆ ನಂ.27 ರಲ್ಲಿ 14 ಗುಂಟೆ, ಸರ್ವೆ ನಂ.10 ರಲ್ಲಿ 6 ಗುಂಟೆ ಮತ್ತು 11 ಗುಂಟೆ ಬರುತ್ತದೆ. ಈ ಮೇಲಿನ ಎಲ್ಲ ಜಮೀನುಗಳು ನನ್ನ ತಂದೆಯ ಹೆಸರಿನಲ್ಲಿ ಇರುತ್ತವೆ.

ನನ್ನ ತಂದೆಗೆ ಒಟ್ಟು 04 ಜನ ಮಕ್ಕಳು. ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಎಲ್ಲರು ವಿವಾಹ ಮಾಡಿಕೊಂಡಿರುತ್ತಾರೆ. ಸರ್ವೆ ನಂ.89 ರಲ್ಲಿ 33 ಗುಂಟೆ ಮತ್ತು 35 ಗುಂಟೆ ಜಮೀನು ಇದ್ದು, ತೆಂಗಿನ ಗಿಡಗಳನ್ನು ಮತ್ತು ಅಡಿಕೆ ಗಿಡಗಳನ್ನು ಹಾಕಲಾಗಿರುತ್ತದೆ. ನಮ್ಮ ಮನೆಯ ಆಡಳಿತವನ್ನು ನಾನೇಯೇ ನೋಡಿಕೊಳ್ಳುತ್ತೇನೆ. ದಾವಾ ಆಸ್ತಿ ಬಿಟ್ಟು ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇರುತ್ತವೆ.

2 ನೇ ಪ್ರತಿವಾದಿ ಸಿದ್ದಮ್ಮ ನನ್ನ ದೊಡ್ಡಮ್ಮನವರಾಗಬೇಕು. ಸದರಿ ನನ್ನ ದೊಡ್ಡಮ್ಮನವರಿಗೆ ಓದಲು–ಬರೆಯಲು ಬರುತ್ತದಯೇ ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರು ನಾಗಮ್ಮ ಆಗಿರುತ್ತದೆ. 2 ನೇ ಪ್ರತಿವಾದಿಯು ನನ್ನ ತಾಯಿಯ ಸ್ವಂತ ಅಕ್ಕನಾಗಿರುತ್ತಾರೆ. ನನ್ನ ತಾಯಿ ಹಾಗೂ ದೊಡ್ಡಮ್ಮನವರ ತಂದೆ–ತಾಯಿ ಹೆಸರುಗಳ ಬಗ್ಗೆ ಕೇಳಲಾಗಿ ಸಾಕ್ಷಿಯು ನನ್ನ ಅಜ್ಜನ ಹೆಸರು ಗೊತ್ತಿಲ್ಲ, ನನ್ನ ಅಜ್ಜಿಯ ಹೆಸರು ಸಾಕಮ್ಮ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಈಗ ಸುಮಾರು 70 ವರ್ಷ ಆಗಿರಬಹುದು. ನನ್ನ ದೊಡ್ಡಮ್ಮನವರಿಗೆ ನನ್ನ ತಾಯಿಗಿಂತ ಎರಡು ವರ್ಷ ಹೆಚ್ಚಿರಬಹುದು, ಅಂದರೆ ಸುಮಾರು

72 ವರ್ಷ ಆಗಿರುತ್ತದೆ.

ನನ್ನ ಖಾಯಂ ವಿಳಾಸ ಕೆ.ದಾಸರಹಳ್ಳಿ, ಕಡೂರು ತಾಲ್ಲೂಕು. ನನ್ನ ದೊಡ್ಡಮ್ಮ ಅಂದರೆ 2 ನೇ ಪ್ರತಿವಾದಿಯವರದ್ದು ತರೀಕೆರೆಯ ಕೋಡಿಕ್ಯಾಂಪ್ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ಮೂಲತಃ ನನ್ನ ತಂದೆಯ ಚಿಕ್ಕಪ್ಪನವರಿಗೆ ಸೇರಿದ್ದಾಗಿರುತ್ತದೆ. ನನ್ನ ತಂದೆಯ ಚಿಕ್ಕಪ್ಪನವರ ಹೆಸರು ಮುದಿಗೌಡರು ಎಂದಾಗಿರುತ್ತದೆ. ಸಾಕ್ಷಿ ಮುಂದುವರೆದು ಅವರ ಮಗಳಾದ ಗಂಗಮ್ಮನವರಿಂದ ಖರೀದಿಸಿದ ಸ್ವತ್ತಾಗಿರುತ್ತದೆ. ನಾನು ಸದರಿ ದಾಖಲಾತಿಯನ್ನು ಪರಿಶೀಲಿಸಿರುವುದಿಲ್ಲ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯ ಖಾತೆಯು ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸ್ವಾಧೀನದಲ್ಲಿ ಈಗಲೂ ನಾವೇ ಇರುತ್ತೇವೆ. ಸಾಕ್ಷಿ ಮುಂದುವರೆದು ಕರಾರುಪತ್ರ ಮಾಡಿಕೊಂಡಾಗಿನಿಂದಲೂ ನಾವೇ ಸ್ವಾಧೀನದಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ.

ಸರ್ವೆ ನಂ.89 ಅಂದರೆ ದಾವಾ ಸ್ವತ್ತು ಖುಷ್ಕಿ ಜಮೀನು ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿಗೆ ನೀರಾವರಿ ಸ್ವಲಭ್ಯವಾದ ಕೆರೆ, ಕೊಳ, ಹಳ್ಳ ಯಾವುದೂ ಸಹ ದಾವಾ ಸ್ವತ್ತಿನಲ್ಲಿ ಅಥವಾ ಅಕ್ಕ-ಪಕ್ಕ ಇರುವುದಿಲ್ಲ, ದಾವಾ ಸ್ವತ್ತಿನಲ್ಲಿ ನಾವು ಸ್ವಾಧೀನ ಇರುವ ಬಗ್ಗೆಯಾಗಲಿ ಅಥವಾ ಕಂದಾಯ ಪಾವತಿಸಿದ ಬಗ್ಗೆಯಾಗಲಿ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಗಳು ಈ ದಾವೆಯಲ್ಲಿ ತಮ್ಮ ತಕರಾರಿನಲ್ಲಿ ತಿಳಿಸಿರುವ ಅಂಶಗಳನ್ನು ತಿಳಿದುಕೊಂಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನ್ಯಾಯಾಲಯಕ್ಕೆ ಪ್ರತಿವಾದಿಗಳು ತಕರಾರನ್ನು ಸಲ್ಲಿಸಿರುವುದಿಲ್ಲ ಮತ್ತು ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ.

ದಾವಾ ಆಸ್ತಿಗೂ ಮತ್ತು ತರೀಕೆರೆಗೂ ಸುಮಾರು 40 ಕಿ.ಮೀ ಅಂತರವಿರುತ್ತದೆ ಎಂದರೆ ಸರಿ. ಪ್ರತಿವಾದಿಗಳಿಗೆ ಒಪ್ಪಣಸೆ ಗ್ರಾಮದಲ್ಲಿ ದಾವಾ ಆಸ್ತಿಯನ್ನು ಬಿಟ್ಟರೆ ಬೇರೆ ಆಸ್ತಿ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿ ಸರ್ವೆ ನಂ.89 ರ ಇತ್ತೀಚಿನ ಪಹಣಿ ಮತ್ತು ಎಂ.ಆರ್.ಗಳನ್ನು ಪರಿಶೀಲಿಸಿ ನೋಡಿರುವುದಿಲ್ಲ. ಸರ್ವೆ ನಂ.89 ರಲ್ಲಿರುವ 36 ಗುಂಟೆ ಜಮೀನಿನ ಆಕರ ಹೇಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಉದ್ದ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು 2 ನೇ ಪ್ರತಿವಾದಿಯು ಕ್ರಯಕ್ಕೆ ಪಡೆದ ಆಸ್ತಿ ಎಂದರೆ ಸರಿ.

ನಾನು ಈ ದಾವೆಯನ್ನು ಹಾಕುವ ಪೂರ್ವದಲ್ಲಿ ಪ್ರತಿವಾದಿಯರಿಗೆ ನೋಟೀಸನ್ನು ನೀಡಿದ್ದು, ಸದರಿ ನೋಟೀಸಿಗೆ ಪ್ರತ್ಯುತ್ತರವನ್ನು ನೀಡಿರುತ್ತಾರೆ ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಪಿ.1 ರ ಪಹಣಿಯ ಕಾಲಂ.9 ರ ಮಾಲೀಕರ ಹೆಸರಿನಲ್ಲಿ 2 ನೇ ಪ್ರತಿವಾದಿ ಸಿದ್ದಮ್ಮನವರ ಹೆಸರು  ನಮೂದು ಇರುವುದಿಲ್ಲ ಎಂದರೆ ಸರಿ. ಇತ್ತೀಚಿಗೆ ದಾವಾ ಆಸ್ತಿಯು 2 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಮುಂದುವರೆದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಯು ಯಾವಾಗ ಕ್ರಯಕ್ಕೆ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಹೆಸರಿನಲ್ಲಿರುವ ಕ್ರಯ ಪತ್ರ, ಎಂ.ಆರ್. ಮತ್ತು ಇ.ಸಿ.ಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ, ಅದನ್ನು ಕೇಳಿರುವುದಿಲ್ಲ ಮತ್ತು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಹೆಸರಿನಲ್ಲಿರುವ ದಾವಾ ಆಸ್ತಿಗೆ ಸಂಬಂಧಿಸಿದಂತೆ ರೆವಿನ್ಯೂ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನಿಪಿ.2 ರ ಕ್ರಯದ ಒಪ್ಪಂದದ ಪತ್ರವನ್ನು ತರೀಕೆರೆಯ ತಾಲ್ಲೂಕು ಕಛೇರಿಯಲ್ಲಿರುವ ಪರಮೇಶ್ವರಪ್ಪನವರು ತಯಾರಿಸಿರುತ್ತಾರೆ. ನಿಪಿ.2 ರ ಕ್ರಯ ಕರಾರು ಪತ್ರವನ್ನು ಸಾಕ್ಷಿದಾರರಾದ ಜಯಣ್ಣರವರ ಬಳಿ ಓದಿ ತಿಳಿದುಕೊಂಡಿರುತ್ತೇನೆ. ಈ ಪತ್ರದಲ್ಲಿ ಜಯಣ್ಣರವರು ಸಾಕ್ಷಿದಾರರಾಗಿ ಸಹಿ ಮಾಡಿರುವುದಿಲ್ಲ, ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ರ ಕ್ರಯ ಕರಾರು ಪತ್ರಕ್ಕೆ 04 ಜನರು ಸಹಿ ಮಾಡಿರುತ್ತೇವೆ. 04 ಜನರನ್ನು ಹೊರತುಪಡಿಸಿ ಬೇರೆ ಯಾರೂ ಸಹಿ ಮಾಡಿರುವುದಿಲ್ಲ. 1 ನೇ ಪ್ರತಿವಾದಿಯು ಕನ್ನಡದಲ್ಲಿ ಸಹಿ ಮಾಡಿರುತ್ತಾರೆ. 1 ನೇ ಪ್ರತಿವಾದಿಯು ದಾವಾ ಆಸ್ತಿಗೆ ಮಾಲೀಕರಾಗಿರುವುದಿಲ್ಲ ಎಂದರೆ ಸರಿ.

ತಾಲ್ಲೂಕು ಕಛೇರಿಯಲ್ಲಿ ಸ್ವಾಧೀನ ಇರುವ ಬಗ್ಗೆ ಸ್ವಾಧೀನ ದೃಢೀಕರಣ ಪತ್ರ ನೀಡುತ್ತಾರೆ ಎಂದರೆ ಸರಿ. ನಾನು ದಾವಾ ಆಸ್ತಿಯಲ್ಲಿ ಸ್ವಾಧೀನ ಇಲ್ಲದಿರುವುದಿಂದಲೇ ಸ್ವಾಧೀನ ದೃಢೀಕರಣ ಪತ್ರವನ್ನು  ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 2016 ರಲ್ಲಿ ದಾವಾ ಆಸ್ತಿಗೆ ಸಂಬಂದಿಸಿದಂತೆ ಮೌಲ್ಯ ಎಷ್ಟಿತ್ತು ಎಂದು ತೋರಿಸಲು ಉಪನೊಂದಣಾಧಿಕಾರಿಗಳ ಕಛೇರಿಯಿಂದ ದಾಖಲಾತಿಗಳನ್ನು ಪಡೆದು ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯ ಮೌಲ್ಯದ ಬಗ್ಗೆ ದಾಖಲಾತಿಗಳನ್ನು ಪಡೆದು

ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲ. ನಿಪಿ.2 ರ ಕ್ರಯ ಕರಾರು ಪತ್ರದಲ್ಲಿ ಸ್ವಾಧೀನ ಬಿಟ್ಟುಕೊಟ್ಟಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ,

**(ಮುಂದುವರೆದ ಪಾಟೀ ಸವಾಲಿಗೆ ಸಮಯಾಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದಃನ್ಯಾ:ದಂ.,ರವರು ಕಡೂರು.